<u>**ಸಿ.ಸಿ. ಸಂ. 932/2022**</u>

<u>ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ.</u>

**ಅಸಾ-*2* (ಚಾಸಾ-*2)***

| | | |
|---|---|---|
| ಹೆಸರು | : | ಮಲ್ಲಪ್ಪ ಕೂಲಿ |
| ತಂದೆಯ / ಗಂಡನ ಹೆಸರು | : | ಯಲ್ಲಪ್ಪ ಕೂಲಿ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಮಹಾಲಿಂಗಪೂರ |

<u>ದಿನಾಂಕ: 07-01-2023 ರಂದು ಸಾಕ್ಷಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಖ್ಯ ವಿಚಾರಣೆ :</u> ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನಗೆ ಚಾಸಾ 3 ಮತ್ತು 6 ಇವರ ಪರಿಚಯ ನನಗೆ ಇದೆ. ದಿಃ 24-10-2021 ರಂದು ಕೆಸರಕೊಪ್ಪ ರಸ್ತೆಯ ಹತ್ತಿರ ಪೋಲಿಸರು ಪಂಚನಾಮೆಗೆ ಬಂದಿದ್ದಾಗ ಅಪಘಾತ ಸ್ಥಳವನ್ನು ಪರಿಶೀಲನೆ ಮಾಡಿ ಪಂಚನಾಮೆ ಮಾಡಿ ಪಂಚರೆಂದು ನನ್ನ ಸಹಿ ಪಡೆದುಕೊಂಡರು. ಸದರಿ ಪಂಚನಾಮೆಯನ್ನು ಬೆಳಿಗ್ಗೆ 9 ರಿಂದ 10 ಗಂಟೆಯವರೆಗೆ ಮಾಡಿ ಘಟನಾ ಸ್ಥಳದ ಭಾವಚಿತ್ರ ತೆಗೆದು ಹಾಥ ನಕಾಶೆ ತೆಗೆದಿರುತ್ತಾರೆ ಮತ್ತು ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿ ಘಟನಾ ಸ್ಥಳದ ಪಂಚನಾಮೆ, ಹಾಥ ನಕಾಶೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 2 ಮತ್ತು 3, ಅವುಗಳಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ 2 ಎ ಮತ್ತು 3 ಎ ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿ ಘಟನಾ ಸ್ಥಳದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 4 ಮತ್ತು 5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : 1 ನೇ ಆರೋಪಿ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ</u>**

ಘಟನಾ ಸ್ಥಳದಲ್ಲಿ ಅಪಘಾತ ಆಗಿದ್ದಕ್ಕೆ ನನ್ನನ್ನು ಪಂಚನೆಂದು ಸಹಿ ಪಡೆದಿರುತ್ತಾರೆ ಆದರೆ ಅಪಘಾತ ಯಾವಾಗ ಆಯಿತು ಎಂದು ನನಗೆ ಮಾಹಿತಿ ಇಲ್ಲ. ಅಪಘಾತದ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಪಿರ್ಯಾದುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇಲ್ಲ. ನಾನು ಸಹಿ ಮಾತ್ರ ಮಾಡಿರುತ್ತೇನೆ. ಅಪಘಾತದ ಬಗ್ಗೆ ಮತ್ತು ಪಂಚನಾಮೆ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಫಿರ್ಯಾದುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ :</u>**

ಸಹಾಯಕ ಸರ್ಕಾರಿ ಅಭಿಯೋಜಕರು ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇ. ಕೇ. ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ .